# ಕರ್ನಾಟಕ ಜೀವವೈವಿಧ್ಯ ಮಂಡಳಿ

**(ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಇಲಾಖೆ)**

## 47ನೇ ಮಂಡಳಿ ಸಭೆಯ ಕಾರ್ಯಸೂಚಿ

ದಿನಾಂಕ: 30/06/2021 ಸಮಯ: ಬೆಳಗ್ಗೆ 11.00 ಗಂಟೆಗೆ

# ಕರ್ನಾಟಕ ಜೀವವೈವಿಧ್ಯ ಮಂಡಳಿ
## 47ನೇ ಮಂಡಳಿ ಸಭೆ
## ಸೂಚ್ಯಾಂಕ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| I | 47ನೇ ಕಾರ್ಯಸೂಚಿ | 1-12 |
| II | ಅನುಬಂಧಗಳು | |
| 1 | ಅನುಬಂಧ-1 | 13-33 |
| 2 | ಅನುಬಂಧ-2 | 34-47 |
| | ಅನುಬಂಧ-2-ಅ | 48-53 |
| | ಅನುಬಂಧ-2-ಆ | 54-55 |
| | ಅನುಬಂಧ-2-ಇ | 56-58 |
| | ಅನುಬಂಧ-2-ಈ | 59-60 |
| | ಅನುಬಂಧ-2-ಉ | 61 |
| | ಅನುಬಂಧ-2-ಊ | 62-63 |
| | ಅನುಬಂಧ-2-ಋ | 64 |
| | ಅನುಬಂಧ-2-ಋ | 65-66 |
| 3 | ಅನುಬಂಧ-3 | 67-68 |
| 4 | ಅನುಬಂಧ-4 | 69-81 |
| 5 | ಅನುಬಂಧ-5 | 82-84 |
| 6 | ಅನುಬಂಧ-6 | 85-88 |
| 7 | ಅನುಬಂಧ-7 | 89 |
| 8 | ಅನುಬಂಧ-8 | 90-95 |
| 9 | ಅನುಬಂಧ-9 | 96 |
| 10 | ಅನುಬಂಧ-10 | 97-98 |

**47/1 – 46ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**

ದಿನಾಂಕ 28/01/2021ರಂದು ಜರುಗಿದ ಮಂಡಳಿಯ 46ನೇ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ದಿ: 12/02/2021ರಂದು ರವಾನಿಸಲಾಗಿದ್ದು ಈ ಬಗ್ಗೆ ಯಾವುದೇ ತಿದ್ದುಪಡಿ ಬಂದಿಲ್ಲದ ಕಾರಣ ಈ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. (ಅನುಬಂಧ-1)

**47/2 – 46ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು:**

46ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. (ಅನುಬಂಧ-2)

**47/3 – (ಅ) ಜನವರಿ 2021 ರಿಂದ ಜೂನ್ 2021ರವರೆಗೆ ಮಂಡಳಿಯು ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು ಹಾಗೂ ವಿಡಿಯೋ ಕಾನ್‌ಫರೆನ್ಸ್‌ಗಳು**

| | | |
|---|---|---|
| 1 | 13/01/2021 | ಎಬಿಎಸ್‌ನ ಪರಿಣಿತ ತಜ್ಞರ ಸಮಿತಿ ಸಭೆ |
| 2 | 19/01/2021 | ಜೀವವೈವಿಧ್ಯ ಪಾರಂಪರಿಕ ತಾಣದ ಕುರಿತು ಸಭೆ |
| 3 | 22/01/2021 | ವಿಡಿಯೋ ಕಾನ್‌ಫರೆನ್ಸ್ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 4 | 28/01/2021 | 46ನೇ ಮಂಡಳಿಯ ಸಭೆ |
| 5 | 29/01/2021 | ಜನತಾ ಜೀವವೈವಿಧ್ಯ ಪಾರಂಪರಿಕ ತಾಣ ಕುರಿತ ಸಮಾಲೋಚನಾ ಸಭೆ. |
| 6 | 26/03/2021 | ವಿಡಿಯೋ ಕಾನ್‌ಫರೆನ್ಸ್ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 7 | 06/03/2021 | ಎಬಿಎಸ್ – ಬ್ರೈನ್ ಸ್ಟಾರ್ಮಿಂಗ್ ಕಾರ್ಯಗಾರ |
| 8 | 29/03/2021 | ವಿಡಿಯೋ ಕಾನ್‌ಫರೆನ್ಸ್ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 9 | 30/3/2021 | ಎಬಿಎಸ್‌ನ ಪರಿಣಿತ ತಜ್ಞರ ಸಮಿತಿ ಸಭೆ |
| 10 | 28/04/2021 | ವಿಡಿಯೋ ಕಾನ್‌ಫರೆನ್ಸ್ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 11 | 11/05/2021 | ಎಬಿಎಸ್‌ನ ಪರಿಣಿತ ತಜ್ಞರ ಸಮಿತಿ ಸಭೆ |
| 12 | 25/06/2021 | ವಿಡಿಯೋ ಕಾನ್‌ಫರೆನ್ಸ್ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |

47/3 – (ಆ) ಮಂಡಳಿಯ ಸನ್ಮಾನ್ಯ ಅಧ್ಯಕ್ಷರಾದ ಮಾನ್ಯ ಶ್ರೀ ಅನಂತ ಹೆಗಡೆ ಅಶೀಸರರವರು ಜನವರಿ 2021 ರಿಂದ ಜೂನ್ 2021ರವರೆಗೆ ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು ಹಾಗೂ ವಿಡಿಯೋ ಕಾನ್‌ಫರೆನ್ಸ್‌ಗಳು

| ಕ್ರ.ಸಂ | ದಿನಾಂಕ | ವಿವರ |
|---|---|---|
| 1 | 05-01-2021 | ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಡಿ.ಸಿ., ಸಿ.ಇ.ಓ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಟೆರಿಟೋರಿಯಲ್), ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ), ಜಿಲ್ಲಾ ಕೃಷಿ ಅಧಿಕಾರಿಗಳು, ಜಿಲ್ಲಾ ತೋಟಗಾರಿಕಾಧಿಕಾರಿಗಳು, ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳು, ಜಿಲ್ಲಾ ಮಾಲಿನ್ಯ ಅಧಿಕಾರಿಗಳು, ಜಿಲ್ಲಾ ನಗರಕೋಶ ಮುಖ್ಯಸ್ಥರು ಇವರುಗಳ ಜೊತೆ ಅರಣ್ಯ, ಪರಿಸರ ಜೀವವೈವಿಧ್ಯ ಸಂರಕ್ಷಣೆ ಅಭಿವೃದ್ಧಿ ಕುರಿತು ಸಮಾಲೋಚನೆ ನಡೆಸಲಾಯಿತು. |
| 2 | 08-01-2021 | ಸಿದ್ದಾಪುರ ತಾಲೂಕಾ ಮಾವಿನಗುಂಡಿ ಮಹಿಳಾ ಸತ್ಯಾಗ್ರಹ ವನಕ್ಕೆ ಹಾಗೂ ಕತ್ತಲೆಕಾನು ಪ್ರದೇಶಕ್ಕೆ ಪಶ್ಚಿಮಘಟ್ಟದ ಅರಣ್ಯ ತಜ್ಞರ ಜೊತೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ವೀಕ್ಷಣೆ ಮಾಡಲಾಯಿತು. ಪಶ್ಚಿಮ ಘಟ್ಟದ ಮಿರಿಸ್ಟಿಕಾಸ್ವಾಂಪ್ ಪರಿಸ್ಥಿತಿ, ಸಂರಕ್ಷಣೆ ಕುರಿತು ತಜ್ಞರು, ಅರಣ್ಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಯಿತು. |
| 3 | 13/01/2021 | ಅಪರ ಪ್ರಧಾನ ಕಾರ್ಯದರ್ಶಿಗಳೊಂದಿಗೆ ರಾಜ್ಯ ಕೀಟ ಹಾಗೂ ಆರ್ಕಿಡ್‌ನ ಘೋಷಣೆ ಕುರಿತ ಸಭೆ. |
| 4 | 19-01-2021 | ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿಅವರ ಗೃಹ ಕಛೇರಿಯಲ್ಲಿ ನಡೆದರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ಮುಂಡಿಗೆಕೆರೆ ಪಕ್ಷಿಧಾಮವನ್ನು ವನ್ಯಜೀವಿ ಕಾಯ್ದೆಯಡಿಯಲ್ಲಿ ವನ್ಯಜೀವಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಲು ನಿರ್ಧರಿಸಲಾಯಿತು. |
| 5 | 21-01-2021 | ದಾಂಡೇಲಿ ನಗರ ಸಭೆಯ ಜೀವವೈವಿಧ್ಯ ನಿರ್ವಹಣಾ ಸಮಿತಿ ಸಭೆಯಲ್ಲಿ ಮಾರ್ಗದರ್ಶನ ನೀಡಿದರು. ನಗರ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಹಸಿಲ್ದಾರ್, ನಗರಸಭಾ ಸದಸ್ಯರು, ಸಮಿತಿ ಸದಸ್ಯರು, ನಗರದ ಗಣ್ಯ ನಾಗರೀಕರು, ಸಂಸ್ಥೆಗಳು ಜಿಲ್ಲಾ ಮಾಲಿನ್ಯ ನಿಯಂತ್ರಣಾಧಿಕಾರಿಗಳು, **westcoast paper mill** ನ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು. |
| 6 | 29-01-2021 | ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಕಾರ್ಯಚಟುವಟಿಕೆ, ಜನತಾ ಜೀವವೈವಿಧ್ಯ ದಾಖಲಾತಿ ಅನುಭವ ಮಂಡನೆ ಹಾಗೂ ಜಾಗತಿಕ ಜೀವವೈವಿಧ್ಯ ದಿನಾಚರಣೆ ಕುರಿತು ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಅರಣ್ಯಭವನದ 8ನೇ ಮಹಡಿಯ ಸಭಾಕೊಠಡಿಯಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮಂತ್ರಿಗಳು ನೆರವೇರಿಸಲಾಯಿತು. |

| | | |
|---|---|---|
| 7 | 02-02-2021 | ಜಾಗತಿಕ ಜೌಗು ದಿನ ಸಂದರ್ಭದಲ್ಲಿಕರ್ನಾಟಕಜೀವವೈವಿಧ್ಯ ಮಂಡಳ ರಾಜ್ಯದಅರಣ್ಯ ಸಚಿವರಿಗೆ ವಿಶೇಷ ಶಿಫಾರಸು ಮನವಿ ಸಲ್ಲಿಸಲು ದಿನಾಂಕ:02-02-2021 ರಂದು ವಿಧಾನ ಸೌಧದಲ್ಲಿ ಸರಳ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಜೊತೆ ಏರ್ಪಡಿಸಿತ್ತು. ಆರಂಭದಲ್ಲಿ ಹೂವಿನ ಗಿಡಕ್ಕೆ ನೀರೆರೆಯುವ ಮೂಲಕ ಅರಣ್ಯ ಸಚಿವ ಶ್ರೀಅರವಿಂದ ಲಿಂಬಾವಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಅವರಿಗೆ ಜೀವವೈವಿಧ್ಯ ಮಂಡಳ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ಶಿಫಾರಸು ಮನವಿ ನೀಡಿದರು. |
| 8 | 12-02-2021 | ಸಿ.ಸಿ.ಎಫ್ ಅವರಕಛೇರಿಯಲ್ಲಿ ಸಿ.ಸಿ.ಎಫ್, ಡಿ.ಸಿ.ಎಫ್ ಟೆರಿಟೋರಿಯಲ್, ಬೆಳಗಾವಿ ಮತ್ತು ಗೋಕಾಕ್ ಡಿ.ಸಿ.ಎಫ್ ವನ್ಯಜೀವಿ, ಡಿ.ಸಿ.ಎಫ್ ಸಾಮಾಜಿಕ ಅರಣ್ಯ ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. |
| 9 | 15-02-2021 | ವರದಹಳ್ಳಿ ಶ್ರೀಧರಾಶ್ರಮಕ್ಕೆ ಭೇಟಿ ನೀಡಿ, ಡಿ.ಸಿ.ಎಫ್, ಆರ್.ಎಫ್.ಒಇವರುಗಳ ಜೊತೆಸಾಗರ ಶಿವಪ್ಪನಾಯಕ ನಗರದ ಬೆಟ್ಟ ಅರಣ್ಯ ವೀಕ್ಷಣೆ ಮಾಡಲಾಯಿತು. |
| 10 | 18-02-2021 | ಶಿರಸಿ ನಗರಸಭೆಯಲ್ಲಿ ಜೀವವೈವಿಧ್ಯ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಗೆ ನಗರಸಭೆ ಜೀವವೈವಿಧ್ಯ ನಿರ್ವಹಣಾ ಸಮಿತಿಅಧ್ಯಕ್ಷರು, ಕಾರ್ಯದರ್ಶಿ, ಸದಸ್ಯರುಗಳು ಪಾಲ್ಗೊಂಡಿದ್ದರು.ಜೀವವೈವಿಧ್ಯ ಪರಿಸರ ಅಭಿವೃದ್ಧಿ ಕುರಿತು ಸಮಾಲೋಚನೆ ನಡೆಸಲಾಯಿತು. |
| 11 | 19-02-2021 | ಭಟ್ಕಳ ತಾಲ್ಲೂಕು ಬೈಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಸರಸ್ವತಿ ಅಳವೆ ಪ್ರದೇಶಕ್ಕೆ ಭೇಟಿ (ಮುರುಡೇಶ್ವರ ಮತ್ತು ಬೈಲೂರು ಮಧ್ಯೆಇರುವ ಪ್ರದೇಶ). ಈ ಸ್ಥಳಕ್ಕೆ ಎ.ಸಿ.ಎಫ್ ಮತ್ತು ಆರ್.ಎಫ್.ಒ ಬಂದಿದ್ದರು. 11 ಘಂಟೆಗೆ ಭಟ್ಕಳ ತಾಲ್ಲೂಕು ಪಂಚಾಯತ್‌ನಲ್ಲಿ ಜೀವವೈವಿಧ್ಯ ಸಮಿತಿ ಸಭೆಗೆ ಪಾಲ್ಗೊಳ್ಳಲಾಯಿತು. |
| 12 | 27-02-2021 | ಶಿರಸಿ ತಾಲ್ಲೂಕು ಸದಾಶಿವಳ್ಳಿ ಗ್ರಾಮ ಪಂಚಾಯತ್‌ನ ಸ್ವಚ್ಛತಾಅಭಿಯಾನ ಕಾರ್ಯಕ್ರಮದ ಉದ್ಘಾಟನೆ ಮಾಡಲಾಯಿತು.ಇದೇ ಸಮಯದಲ್ಲಿ ಜೀವವೈವಿಧ್ಯ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳಲಾಯಿತು. |
| 13 | 04-03-2021 | ತೋಂಟದಾರ್ಯ ಮಠಕ್ಕೆ ಭೇಟಿ ನೀಡಿ ಪೂಜ್ಯ ತೋಂಟದಾರ್ಯ ಸ್ವಾಮೀಜಿಯವರನ್ನು ಭೇಟಿ ಮಾಡಲಾಯಿತು. ಬೆಳಗ್ಗೆ 9-45ಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿ ಡಿ.ಸಿ.ಎಫ್ (ಪ್ರಾದೇಶಿಕ) ಎ.ಸಿ.ಎಫ್, ಆರ್.ಎಫ್.ಒ ಅವರ ಜೊತೆ ಸಮಾಲೋಚನೆ ನಡೆಸಲಾಯಿತು. |
| 14 | 08-03-2021 | ಬೀದರ್ ಜಿಲ್ಲೆಯ ಡಿ.ಸಿ.ಎಫ್ ಕಛೇರಿಯಲ್ಲಿ ಡಿ.ಎಫ್.ಒ ಟೆರಿಟೋರಿಯಲ್, ಡಿ.ಸಿ.ಎಫ್ ಸಾಮಾಜಿಕ ಅರಣ್ಯ, ಎ.ಸಿ.ಎಫ್, ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. |

| | | |
|---|---|---|
| 15 | 09-03-2021 | ಸಿ.ಸಿ.ಎಫ್ ಕಛೇರಿಯಲ್ಲಿ ಡಿ.ಎಫ್.ಓ ಟೆರಿಟೋರಿಯಲ್, ಡಿ.ಸಿ.ಎಫ್ ಸಾಮಾಜಿಕ ಅರಣ್ಯ, ಎ.ಸಿ.ಎಫ್, ಇವರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. 11 ಘಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪರಿಸರ, ಅರಣ್ಯ, ಕೆರೆ ಅಭಿವೃದ್ಧಿ ಹಾಗೂ ಜೀವವೈವಿಧ್ಯ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಲಾಯಿತು. |
| 16 | 11-03-2021 | ತಾರಗೋಡ ಬೊಮ್ಮನಹಳ್ಳಿ ಸಮೀಪದ ಕೈಲಾಸಗುಡ್ಡಕ್ಕೆ ಭೇಟಿ ನೀಡಿ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು. |
| 17 | 14-03-2021 | ಕೊಪ್ಪ ರಸ್ತೆಯಲ್ಲಿರುವ ಬಳಗಟ್ಟೆ ಗ್ರೀನ್ಸ್ ಫಾರಂ ಎಂಬ ಸ್ಥಳದಲ್ಲಿ ನಡೆಯುವ ರೋಟರಿ ಪರಿಸರ ಸಮ್ಮೇಳನದಲ್ಲಿ ಭಾಗವಹಿಸಲಾಯಿತು. |
| 18 | 15-03-2021 | ಶೃಂಗೇರಿ ತಾಲ್ಲೂಕು ಪಂಚಾಯತ್ ಜೀವವೈವಿಧ್ಯ ಸಮಿತಿ ಜೊತೆ ಸಮಾಲೋಚನಾ ಸಭೆ ನಡೆಸಲಾಯಿತು. |
| 19 | 06-04-2021 | ಶಿವಮೊಗ್ಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ತೋಟಗಾರಿಕಾಧಿಕಾರಿಗಳು, ಜಿಲ್ಲಾ ಕೃಷಿ ಅಧಿಕಾರಿಗಳು ಕೃಷಿ ವಿಶ್ವವಿದ್ಯಾಲಯದ ಕೀಟ ತಜ್ಞರ ಜೊತೆ ಸಮಾಲೋಚನೆ ನಡೆಸಲಾಯಿತು. ಜೇನು ಕುಟುಂಬಗಳಿಗೆ ಬಂದಿರುವ ವೈರಸ್ ರೋಗ ತಡೆ ಪರಿಹಾರ ಕ್ರಮಗಳ ಕುರಿತು ಸಮಾಲೋಚನೆ ನಡೆಸಲಾಯಿತು. |
| 20 | 07-04-2021 | ಭದ್ರಾವತಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಟೆರಿಟೋರಿಯಲ್) ಅವರ ಕಛೇರಿಗೆ ಭೇಟಿ ನೀಡಿಸಮಾಲೋಚನೆ ನಡೆಸಲಾಯಿತು.ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಲಾಯಿತು. |
| 21 | 08-04-2021 | ಸಾಗರದಲ್ಲಿ ರಾಘವೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುವ ರೈತರು ಮತ್ತು ಅರಣ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಭಾಗವಹಿಸಲಾಯಿತು. ಈ ಕಾರ್ಯಾಗಾರಕ್ಕೆ ಸಾಗರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಟೆರಿಟೋರಿಯಲ್) ಅವರು ಪಾಲ್ಗೊಂಡಿದ್ದರು. |
| 22 | 16-04-2021 | ಶಿರಸಿಯ ಸಿ.ಸಿ.ಎಫ್. ಕಚೇರಿಯಲ್ಲಿ ಸಮಾಲೋಚನೆ ನಡೆಸಲಾಯಿತು. ಡೀಮ್ಡ ಅರಣ್ಯ ವ್ಯಾಪ್ತಿಯಿಂದ ಬೆಟ್ಟ ಭೂಮಿ ಹೊರಗಿಡುವ ಸರ್ಕಾರದ ಆದೇಶದ ಬಗ್ಗೆ ಹಾಗೂ ಬೇಡ್ತಿ- ವರದಾ ಯೋಜನೆ ಸ್ಥಳ ಸಮೀಕ್ಷೆ ಬಗ್ಗೆ ಎನ್.ಡಬ್ಲು.ಡಿ.ಎ. ಅರಣ್ಯ ಇಲಾಖೆಯ ಒಪ್ಪಿಗೆ ಕೇಳಿರುವ ವಿಷಯ ಕುರಿತು ಸಮಾಲೋಚನೆ ನಡೆಸಲಾಯಿತು. |
| 23 | 17-04-2021 | ಸಾಗರ ತಾಲೂಕಿನ ಆನಂದಪುರ ಬಳಿ ಇರುವ ಯಡೆಹಳ್ಳಿ ಗ್ರಾಮ ಪಂಚಾಯತಕ್ಕೆ ಭೇಟಿ ನೀಡಲಾಯಿತು. ಗಂಟಿಕೊಪ್ಪ ಕಾನು ಪ್ರದೇಶಕ್ಕೆ ಭೇಟಿ ನೀಡಲಾಯಿತು. ತೀರ್ಥಹಳ್ಳಿ ತಾಲೂಕಿನ ಕೊಣಂದೂರು ಗ್ರಾಮ ಪಂಚಾಯತಕ್ಕೆ ತಲುಪಿ ಹಲವನಹಳ್ಳಿ ಕಾನು ಅರಣ್ಯ, ಕೆರೆ ಪ್ರದೇಶಕ್ಕೆ ಭೇಟಿ ನೀಡಲಾಯಿತು. |

| | | |
|---|---|---|
| 24 | 21-04-2021 | ಡಿ.ಸಿ.ಎಫ್. ದಾವಣಗೆರೆ, ಕಮೀಷನರ್ ಮಹಾನಗರ ಪಾಲಿಕೆ ಅವರ ಜೊತೆ ಕುಂದವಾಡಕೆರೆ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಲಾಯಿತು. ಹಂಸಭಾವಿ ಇನ್ನಿತರ ಡೀಮ್ಡ್ ಅರಣ್ಯ ವೀಕ್ಷಣೆ ಮಾಡಿ 4:15ಕ್ಕೆ ಹಾನಗಲ್ ತಾಲ್ಲೂಕು ಪಂಚಾಯತ್‌ಗೆ ತೆರಳಲಾಯಿತು. |
| 25 | 03-05-2021 | ತೀರ್ಥಹಳ್ಳಿ ತಹಶಿಲ್ದಾರ್ ಜೊತೆ ಕೋರ್ಟ್ ವಿಷಯವಾಗಿ ಚರ್ಚೆ ನಡೆಸಲಾಯಿತು. |
| 26 | 06-05-2021 | ಜೀವವೈವಿಧ್ಯ ಅರಣ್ಯ ಯೋಜನೆ ಬಗ್ಗೆ ಚರ್ಚೆ. |
| 27 | 12-05-2021 | ಸೊರಬ ತಹಶಿಲ್ದಾರ್ ಜೊತೆ ಕಾನು ಅರಣ್ಯದ ಬಗ್ಗೆ ಚರ್ಚೆ. |
| 28 | 14-05-2021 | ಭದ್ರಾವತಿ ಆಕಾಶವಾಣಿ ಕಛೇರಿಗೆ ಭೇಟಿ. |
| 29 | 18-05-2021 | ಮುಂಡಗೋಡು ತಾಲ್ಲೂಕು ಪಂಚಾಯತ್ ಭೇಟಿ. |
| 30 | 22-05-2021 | ಸಾಗರದ ಉಲ್ಲೂರು ಕೆರೆ ಆಂದೋಲನ ಸಮ್ಮೇಳನ ಸಭೆ. |
| 31 | 01-06-2021 | ಶಿರಸಿಯಲ್ಲಿ ಅಂಗವಿಕಲ ಮಕ್ಕಳಿಗೆ ಆಹಾರ ಕಿಟ್ ವಿತರಣೆ ಮಾಡಿದರು. |
| 32 | 02-06-2021 | ಕೋವಿಡ್ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾನ್ಯ ಸಭಾಪತಿಗಳೊಂದಿಗೆ ಭಾಗವಹಿಸಿದ್ದರು. |
| 33 | 05-06-2021 | ಪರಿಸರ ದಿನದಂದು ಪಟ್ಟಣದ ಹೊಳೆ ನದಿ ತೀರದಲ್ಲಿ ಪಾದಯಾತ್ರೆ ಜಾಗೃತಿ ನಡೆಸಿದರು. |
| 34 | 08-06-2021 | ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಅರಣ್ಯ ಇಲಾಖೆ ಅಧಿಕಾರಿಗಳ ಜೊತೆಗೆ ತದಡಿ, ಅಘನಾಶಿನಿ, ಕಾಗಲ್, ಹೊಲ್ಲನ್‌ಗದ್ದೆ, ಹೊನ್ನಳ್ಳಿ ಸಮುದ್ರ ತೀರಗಳಿಗೆ ಭೇಟಿ ನೀಡಿದರು. |
| 35 | 11-06-2021 | ಶಿವಮೊಗ್ಗ ಆನಂದಪುರ ಸಮೀಪ ಗಂಟಿಕೊಪ್ಪ ಕಾನು ಪ್ರದೇಶಕ್ಕೆ ಭೇಟಿ ನೀಡಿದರು. |
| 36 | 19-06-2021 | ಬಾಳೆಹೊನ್ನೂರು ಗ್ರಾಮ ಪಂಚಾಯತ್ ಜೀವವೈವಿಧ್ಯ ನಿರ್ವಹಣಾ ಸಮಿತಿ ಅಧ್ಯಕ್ಷರು, ಸದಸ್ಯರುಗಳ ಜೊತೆ ಸಮಾಲೋಚನೆ ನಡೆಸಲಾಯಿತು. ಎ.ಸಿ.ಎಫ್ ಕಛೇರಿಯಲ್ಲಿ ಡಿ.ಎಫ್.ಒ, ಎ.ಸಿ.ಎಫ್, ಆರ್.ಎಫ್.ಒ ಇವರುಗಳ ಜೊತೆಗೆ ಜೀವವೈವಿಧ್ಯ ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಸಮಾಲೋಚನೆ ನಡೆಸಲಾಯಿತು. |
| 37 | 20-06-2021 | ಸಾಗರಕ್ಕೆ ತೆರಳಿ ಸಾಗರ ತಾಲ್ಲೂಕು ಉಳ್ಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಕೊಪ್ಪ, ಚಿತ್ರಟ್ಟೆ, ಮತ್ತಿಕೊಪ್ಪ ಗ್ರಾಮ ಅರಣ್ಯಗಳಿಗೆ ಭೇಟಿ ನೀಡಲಾಯಿತು. ಈ ಸಂದರ್ಭದಲ್ಲಿ ಡಿ.ಎಫ್.ಒ, ಎ.ಸಿ.ಎಫ್, ಆರ್.ಎಫ್.ಒ ಸಾಗರ ಇವರುಗಳು ಉಪಸ್ಥಿತರಿದ್ದರು. |

**47/4- ಜನತಾ ಜೀವವೈವಿಧ್ಯ ದಾಖಲಾತಿ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆ:**

ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆಯಲ್ಲಿ ಶೇಕಡ 100%ರಷ್ಟು ಸಾಧನೆಯನ್ನು ಡಿಸೆಂಬರ್ 2020ರ

ಸಾಲಿನಲ್ಲಿ ಮಾಡಲಾಗಿರುತ್ತದೆ. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆ ಕುರಿತಂತೆ ದಿನಾಂಕ 02/02/2021ರಂದು ಮಾನ್ಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಹಾಗೂ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರೊಂದಿಗೆ ಸಭೆಯನ್ನು ಹಮ್ಮಿಕೊಂಡು ವಿವರವಾಗಿ ಚರ್ಚಿಸಿ ರಾಜ್ಯ ಮಟ್ಟದಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮಧ್ಯೆ ಸಮನ್ವಯ ಸಾಧಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಅಭಿವೃಧ್ಧಿ), ಪಂಚಾಯತ್ ರಾಜ್ ಆಯುಕ್ತಾಲಯರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು ಹಾಗೂ ತಾಲ್ಲೂಕು ವಲಯ ಅರಣ್ಯಾಧಿಕಾರಿ, ಸಾಮಾಜಿಕ ವಿಭಾಗದವರು ತಾಲ್ಲೂಕು ಮಟ್ಟದ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಉಸ್ತುವಾರಿ ವಹಿಸಿಕೊಳ್ಳುವ ಬಗ್ಗೆ ನಿರ್ಣಯವನ್ನು ಕೈಗೊಂಡಿತು. ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಕುರಿತು ನಡವಳಿಯನ್ನು (ಅನುಬಂಧ-3) ಲಗತ್ತಿಸಲಾಗಿದೆ.

ಈ ವಿಷಯವನ್ನು ಸಭೆಯ ಮಾಹಿತಿಗಾಗಿ ಮಂಡಿಸಲಾಗಿದೆ.

<u>47/5 – ಅಳವಿನಂಚಿನಲ್ಲಿರುವ ಪ್ರಬೇಧಗಳು, ಚಂದನ ಇತ್ಯಾದಿ ಕಂಡುಬರುವಂತಹ ಸ್ಥಳಗಳ ಗುರುತಿಸುವಿಕೆ ಹಾಗೂ ಅವುಗಳ ಸಂರಕ್ಷಣೆಗೆ ಎಬಿಎಸ್ ನಿಧಿಯಿಂದ ಅನುದಾನವನ್ನು ನೀಡುವುದು</u>.

ಮಂಡಳಿಯು ನಡೆಸಿದ 46ನೇ ಸಭೆಯಲ್ಲಿ ಶ್ರೀಗಂಧ ಮತ್ತು ರಕ್ತ ಚಂದನ ಮರಗಳನ್ನು ಪಡೆದುಕೊಳ್ಳುವ ಯಶಸ್ವಿ ಬಿಡ್ಡುದಾರರಿಂದ ಪಡೆದ ಎಬಿಎಸ್ ಮೊತ್ತವನ್ನು ಸಂರಕ್ಷಣಾ ಚಟುವಟಿಕೆಗಳಿಗಾಗಿ ಮತ್ತು ಒಟ್ಟಾರೆ ಜೀವವೈವಿಧ್ಯ ಸಂರಕ್ಷಣೆಗಾಗಿ ವಿಶೇಷವಾಗಿ ಔಷಧೀಯ ಸಸ್ಯಗಳು, ಶ್ರೀಗಂಧ ಮತ್ತು ರಕ್ತ ಚಂದನ ಮರಗಳನ್ನು ಹೊಂದಿರುವ ಜಿಲ್ಲೆಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ನೀಡಬೇಕೆಂದು ಚರ್ಚಿಸಲಾಯಿತು.

ಮಂಡಳಿಯ ಸದಸ್ಯರು ವಿವರವಾಗಿ ಚರ್ಚಿಸಿದ ನಂತರ, ಮಂಡಳಿಯು ಕರ್ನಾಟಕ ಅರಣ್ಯ ಇಲಾಖೆ ಮತ್ತು ಆಯ್ದ ಪ್ರದೇಶಗಳ ಬಿಎಂಸಿಗಳ ಸಹಯೋಗದೊಂದಿಗೆ ಕೇಂದ್ರೀಕೃತ ಯೋಜನೆಗಳ ಮೂಲಕ ಹಣವನ್ನು ಸಂರಕ್ಷಣಾ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು ಎಂದು ನಿರ್ಣಯಿಸಲಾಯಿತು.

ಆದ್ದರಿಂದ, ಸಿದ್ದಾಪುರದಲ್ಲಿರುವ ಕತ್ತಲೆಖಾನ್ ಮಿರಿಸ್ಟಿಕಾ ಜೌಗು ಪ್ರದೇಶ, ಸಾಗರ ತಾಲ್ಲೂಕಿನ ಶಿವಮೊಗ್ಗ ಜಿಲ್ಲೆಯ ಸೀತಾ ಅಶೋಕ ವನ ಮಂಡ್ಯ, ಬೀದರ, ಚಾಮರಾಜನಗರ ಜಿಲ್ಲೆಗಳಲ್ಲಿನ ಶ್ರೀಗಂಧ ಮತ್ತು ರಕ್ತ ಚಂದನ ಮತ್ತು ಆರ್ಇಟಿ

ಪ್ರಭೇದಗಳು ಮತ್ತು ಔಷಧೀಯ ಸಸ್ಯಗಳ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿ ಮಾಡಲು ಆಯಾ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ (ಪ್ರಾದೇಶಿಕ ವಿಭಾಗ) ಮೂಲಕ ಸಂಬಂಧಿಸಿದ 5 ತಾಲ್ಲುಕು ಪಂಚಾಯತಿ ಬಿಎಂಸಿಗಳ ಸಹಕಾರ ಪಡೆದು ಪ್ರತಿ ಸ್ಥಳಕ್ಕೆ ತಲಾ ರೂ. 10.00 ಲಕ್ಷಗಳು ಒಟ್ಟು ರೂ 50.00ಲಕ್ಷಗಳನ್ನು ಎಬಿಎಸ್ ನಿಧಿಯಿಂದ ಮಂಜೂರು ಮಾಡಬಹುದು. ಆಯಾ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಂದ ಕ್ರಿಯಾ ಯೋಜನೆಯನ್ನು ಪಡೆದು ಮುಂದಿನ ಕ್ರಮವನ್ನು ಕೈಗೊಳ್ಳಲು ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

<u>47/6: ಎಬಿಎಸ್ ಪರಿಣಿತ ತಜ್ಞರ ಸಮಿತಿ ಸಭೆಯ ನಿರ್ಣಯಗಳು</u>

ಎಬಿಎಸ್ ಪರಿಣಿತ ತಜ್ಞರ ಸಮಿತಿಯ ಸಭೆಗಳನ್ನು ದಿನಾಂಕ 30/03/2021 ಹಾಗೂ 11/05/2021ರಂದು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಗಳಲ್ಲಿ ಕೈಗೊಂಡ ಶಿಫಾರಸ್ಸಿನ ನಿರ್ಣಯಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. (ಅನುಬಂಧ-4)

<u>47/7 – ಎಬಿಎಸ್ ಶಾಖೆಗೆ ತಾಂತ್ರಿಕ ಸಹಾಯಕರ ನೇಮಕಾತಿ</u>

ಎಬಿಎಸ್ ಶಾಖೆಗೆ ತಾಂತ್ರಿಕ ಸಹಾಯಕರ ನೇಮಕಾತಿಯ ಕುರಿತು ದಿನಾಂಕ 22/10/2020ರಂದು ನಡೆದ 45ನೇ ಮಂಡಳಿ ಸಭೆಯಲ್ಲಿ ಚರ್ಚಿಸಲಾಗಿತ್ತು. ನೇಮಕಾತಿಯ ವಿವರವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಈವರೆಗೆ ಅನುಮೋದನೆ ದೊರೆಯದೆ ವಿಳಂಬವಾಗಿರುತ್ತದೆ. ನೇಮಕಾತಿಯು ಅತ್ಯಂತ ತುರ್ತು ಇರುವುದರಿಂದ ನಿಯಮಾನುಸಾರ ನೇಮಕ ಮಾಡಿಕೊಳ್ಳಲು ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

<u>47/8 – ಕರಾವಳಿ ಪ್ರದೇಶಗಳ ಜೀವವೈವಿಧ್ಯ ಸಂರಕ್ಷಣೆ:</u>

ಕರಾವಳಿ ಪ್ರದೇಶಗಳಲ್ಲಿನ ಜೀವವೈವಿಧ್ಯ ಸಂರಕ್ಷಣೆ ಕುರಿತಂತೆ ಪರಿಣಿತ ತಜ್ಞರು ಹಾಗೂ ಸ್ಥಳೀಯ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಿ ಈ ಬಗ್ಗೆ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಮಂಡಿಸುವುದು.

<u>47/9– ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ 2021ರ ಅಭಿಯಾನದ ಕಾರ್ಯಕ್ರಮಗಳು</u>

ಈ ಸಾಲಿನ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ 2021ರ ಘೋಷಾವಾಕ್ಯ "ನಾವು ಪರಿಹಾರದ ಭಾಗಿಧಾರರು" **(WE ARE PART OF THE SOLUTION)** ಎಂಬುದಾಗಿರುತ್ತದೆ. ಈ ಘೋಷವಾಕ್ಯದಡಿಯಲ್ಲಿ ಜೀವವೈವಿಧ್ಯ ಸಂಕರ್ಷಣೆ ಮತ್ತು

ಪರಿಸರವನ್ನು ನಾಶಗೊಳಿಸದೆ ಅದನ್ನು ಮುಂದಿನ ಪೀಳಿಗೆಗಾಗಿ ಉಳಿಸಲು ಹಾಗೂ ಬೆಳೆಸುವ ದೃಷ್ಠಿಕೊನದೊಂದಿಗೆ ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ 2021ರ ಅಭಿಯಾನದ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ 15ನೇ ಜುಲೈ 2021ರಿಂದ ಚಾಲನೆಗೊಳಿಸಲಾಗುವುದು. ಈ ಕಾರ್ಯಕ್ರಮದ ಚಟುವಟಿಕೆಗಳಿಗೆ ರೂ 21,30,000/-ರೂಗಳನ್ನು ಭರಿಸಲಾಗುತ್ತಿದೆ. ಈಗಾಗಲೇ ಈ ವಿಷಯದ ಬಗ್ಗೆ ದಿನಾಂಕ 28/01/2021ರಂದು ನಡೆದ 46ನೇ ಮಂಡಳಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕಾರ್ಯಕ್ರಮದ ವೆಚ್ಚಕ್ಕಾಗಿ ರೂ 30.00ಲಕ್ಷಗಳಿಗೆ ನಿರ್ಣಯವನ್ನು ಪಡೆಯಲಾಗಿರುತ್ತದೆ.

ಮುಂದುವರೆದಂತೆ, ಕಾರ್ಯಕ್ರಮದ ಚಟುವಟಿಕೆಗಳು ಹಾಗೂ ಅಂದಾಜು ವೆಚ್ಚದ ವಿವರಣೆಯನ್ನು (ಅನುಬಂಧ-5ರಲ್ಲಿ) ಲಗತ್ತಿಸಲಾಗಿದೆ.

ಈ ವಿಷಯವನ್ನು ಸಭೆಯ ಮಾಹಿತಿಗಾಗಿ ಮಂಡಿಸಲಾಗಿದೆ.

<u>47/10 – ಭೂ ಕುಸಿತ ವರದಿ, ಅಳಿವಿನಂಚಿನ ಪ್ರಬೇದಗಳ ವರದಿಗಳ ಮಂಡನೆ:</u>

ಅ) ಜೀವವೈವಿಧ್ಯ ಮಂಡಳಿಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸರ್ಕಾರ ರಚಿಸಿದ್ದ ಭೂಕುಸಿತ ಅಧ್ಯಯನ ತಜ್ಞ ಸಮಿತಿಯು ಇದೀಗ ತನ್ನ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ. ಅದರ ಪ್ರತಿಯನ್ನು ಮಾನ್ಯ ಸದಸ್ಯರ ಗಮನಕ್ಕಾಗಿ ಮಂಡಿಸಲಾಗಿದೆ.

ಆ) ಮಂಡಳಿಯು ರಚಿಸಿದ್ದ ತಜ್ಞ ಸಮಿತಿಗಳು ನೀಡಿದ ರಾಜ್ಯದಲ್ಲಿನ ವಿನಾಶದ ಅಂಚಿನ ಸಸ್ಯ ಹಾಗೂ ಪ್ರಾಣಿ ಪ್ರಬೇಧಗಳ ಯಾದಿಯ ವರದಿಗಳನ್ನು, ಮಂಡಳಿಯು ಹಿಂದಿನ ಸಭೆಯಲ್ಲಿ ಅಂಗೀಕರಿಸಿದೆ. ಈ ಕುರಿತಂತೆ, ವಿನಾಶದಂಚಿನ ಸಸ್ಯಗಳ ನಿಕರ ಮಾಹಿತಿಯನ್ನು ಕಲೆಹಾಕಲು **Conservation assessment and Managment Plan (CAMP)** ಶಿಬಿರಗಳನ್ನು ಆಯೋಜಿಸುವಂತೆ ಮಾನ್ಯ ಸದಸ್ಯರಿಂದ ಸಲಹೆಗಳನ್ನು ಪಡೆಯಲಾಗಿರುತ್ತದೆ. ಈ ನಿಟ್ಟಿನಲ್ಲಿ ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ ಈ ಮೂರು ಪ್ರದೇಶಗಳಲ್ಲಿ ತಲಾ ಒಂದರಂತೆ ಒಟ್ಟು ಮೂರು ಅಧ್ಯಯನಗಳ ಶಿಬಿರಗಳನ್ನು ಆಯೋಜಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ.

47/11 – ದಾವಣಗೆರೆ ಜಿಲ್ಲೆಯ ಕುಂದುವಾಡ ಕೆರೆಯ ಸುಸ್ಥಿರ ಅಭಿವೃದ್ಧಿ

ದಾವಣಗೆರೆಯ ಕುಂದುವಾಡ ಕೆರೆಯ ಅಭಿವೃದ್ಧಿ ಕಾಮಗಾರಿಗಳಲ್ಲಿ ಅಲ್ಲಿನ ಜಲಚರಗಳಿಗೆ ಹಾನಿಯಾಗಿರುವ ಕಾಮಗಾರಿಗಳ ಕುರಿತು ಹಲವು ದೂರುಗಳು ಬಂದಿದ್ದವು. ಈ ನಿಟ್ಟಿನಲ್ಲಿ ಮಂಡಳಿಯ ಮಾನ್ಯ ಅಧ್ಯಕ್ಷರು ಸ್ಥಳಕ್ಕೆ ಭೇಟಿ ನೀಡಿ ಸಮಾಲೋಚನೆಯನ್ನು ನಡೆಸಿ, ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ. ದಾವಣಗೆರೆ ನಗರಸಭೆಯ “ಜೀವವೈವಿಧ್ಯ ನಿರ್ವಹಣಾ ಸಮಿತಿಯು” ಆ ಸುರಕ್ಷಾ ಮಾರ್ಗಸೂತ್ರಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ದಾವಣಗೆರೆ ನಗರಸಭೆಗೆ ಮನವಿ ಮಾಡಿದೆ. ಈ ಕುರಿತು ದಾವಣಗೆರೆ ನಗರಸಭೆಯು ಸೂಕ್ತ ಕ್ರಮಕೈಗೊಳ್ಳಬೇಕೆಂದು ಮಂಡಳಿಯು ಈ ಮೂಲಕ ಸೂಚನೆ ನೀಡುವ ಬಗ್ಗೆ ವಿಷಯವನ್ನು  ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

ಅದರಂತೆ, ರಾಜ್ಯದಲ್ಲೆಡೆ ಕೆರೆಗಳ ಹೂಳೆತ್ತುವುದು/ಅಭಿವೃದ್ಧಿಕಾರ್ಯ ಕೈಗೊಳ್ಳುವಾಗ, ಅಲ್ಲಿನ ಜೀವವೈವಿಧ್ಯ ಹಾಗೂ ಪರಿಸರ ರಕ್ಷಿಸುವ ದೃಷ್ಟಿಯಿಂದ ಪಾಲಿಸಬೇಕಾದ ಕನಿಷ್ಠ ನಿಯಮಗಳಿರುವ ಸೂತ್ರಗಳನ್ನು ಅಧಿಕೃತವಾಗಿ ಪ್ರಕಟಿಸುವಂತೆ “ರಾಜ್ಯ ಕೆರೆ ಅಭಿವೃದ್ಧಿ ಪ್ರಾಧಿಕಾರ”ವನ್ನು ಕೋರಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

47/12 – ಅಪರೂಪದ ಮಾವು ಹಾಗೂ ಹಲಸಿನ ತಳಿಗಳ ಸಂರಕ್ಷಣೆ:

ಕಡಿಮೆ ಸಂಖ್ಯೆಯಲ್ಲಿರುವ ಅಪರೂಪದ ಸ್ಥಳೀಯ ಮಾವು / ಹಲಸಿನ ಮರಗಳು ನಶಿಸಿ ಹೋಗದಂತೆ ಅವುಗಳನ್ನು ತಡೆಯಲು, ಸಂರಕ್ಷಿಸಲು ಹಾಗೂ ಸಸ್ಯಗಳ ಪ್ರಸರಣ ಕಾರ್ಯವನ್ನು ನಿರ್ವಹಿಸಲು ಸಂಬಂಧಪಟ್ಟ ತೋಟಗಾರಿಕೆ ಇಲಾಖೆಗೆ ಮಂಡಳಿಯಿಂದ ನಿರ್ದೇಶನ ನೀಡಲು ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿದೆ. ರಾಜ್ಯದ ವಿವಿಧ ಪ್ರದೇಶಗಳಲ್ಲಿರುವ ಎಲ್ಲಾ ಪಾರಂಪರಿಕ ಮಾವು ಹಾಗೂ ಹಲಸಿನ ತಳಿಗಳನ್ನು, ಆಯ್ದ ನರ್ಸರಿಗಳಲ್ಲಿ ಬೆಳೆಸಿ, ರೈತರಿಗೆ ಬೆಳೆಸಲು ಪ್ರೋತ್ಸಾಹ ನೀಡುವಂತೆ ಕ್ರಮ ಕೈಗೊಳ್ಳಲು ತೋಟಗಾರಿಕಾ ಇಲಾಖೆಗೆ ನಿರ್ದೇಶನ ನೀಡುವಂತೆ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

47/13 – ಪಾರಂಪರಿಕ ಮರಗಳ ಸಂರಕ್ಷಣೆ:

ಪರಿಸರ/ಸಾಂಸ್ಕೃತಿಕ/ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿರುವ ಪಾರಂಪರಿಕ ಮರಗಳನ್ನು ಸಂರಕ್ಷಿಸಲು ಹಾಗೂ ಅವುಗಳನ್ನು ಕರ್ನಾಟಕದ ಪಾರಂಪರಿಕ ಮರಗಳೆಂದು ಘೋಷಿಸಬೇಕೆಂದು ಅನೇಕ ಸ್ಥಳೀಯರ ಕೋರಿಕೆಯಾಗಿರುತ್ತದೆ. ಈ ಕುರಿತು ಮಂಡಳಿಯು 2009ರಲ್ಲೆ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದಂತೆ, ಈ ವಿಷಯದ ಬಗ್ಗೆ ಪರಿಣಿತ ಸಮಿತಿಯ ತಜ್ಞರು ಇತ್ತೀಚೆಗೆ ಉತ್ತರ ಪ್ರದೇಶ ಮತ್ತು ಚಂಢೀಘಡ್ ಯುಟಿ ಈಗಾಗಲೇ ಕೆಲವು ಪಾರಂಪರಿಕ ಮರಗಳನ್ನು ಘೋಷಿಸಿವೆ. ಉತ್ತರ ಪ್ರದೇಶದ ಅರಣ್ಯ ಮತ್ತು ಪರಿಸರ ಇಲಾಖೆ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸುವ ಮೂಲಕ ಈ ವಿಷಯದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಪ್ರಬಲಗೊಳಿಸಿದೆ. ಈ ಉದಾಹರಣೆಗಳ ಆಧಾರದ ಮೇಲೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮೂಲಕ ಕರ್ನಾಟಕ ಪಾರಂಪರಿಕ ಮರಗಳನ್ನು ಗುರುತಿಸುವ, ಘೋಷಿಸುವ ಮತ್ತು ನಿರ್ವಹಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲಾಗಿದೆ.(ಅನುಬಂಧ-6)

ಈ ಮಾರ್ಗಸೂಚಿಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಮಹತ್ವದ ಮರಗಳನ್ನು ಗುರುತಿಸಬಹುದು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಭೂಮಾಲೀಕರ ಒಪ್ಪಿಗೆಯನ್ನು ಪಡೆಯುವ ಮೂಲಕ ರಕ್ಷಣಾ ಕ್ರಮಗಳನ್ನು ಪ್ರಾರಂಭಿಸಬಹುದು. ಮೊದಲ ಹೆಜ್ಜೆಯಾಗಿ, ಕರ್ನಾಟಕದ 10 ಪಾರಂಪರಿಕ ಮರಗಳನ್ನು ಈಗಾಗಲೇ ಗುರುತಿಸಿ 2010ರಲ್ಲಿ ಮಂಡಳಿಯು ಆಯ್ಕೆಗೊಳಿಸಿ ಘೋಷಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ವಿಷಯವನ್ನು ಮಂಡಳಿಯ ನಿರ್ದೇಶನ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ಅನುಬಂಧ-7)

<u>47/14 – ಪಾರಂಪರಿಕ ತಾಣಗಳ ಸಂರಕ್ಷಣೆ:</u>

ರಾಜ್ಯದೆಲ್ಲೆಡೆ ಹಾಗೂ ವಿಶೇಷವಾಗಿ ಮಲೆನಾಡಿನಲ್ಲಿ, ಅರಣ್ಯಭೂಮಿಯ ಹೊರಗಡೆ ಇರುವ ಸರ್ಕಾರಿ ಪ್ರದೇಶದಲ್ಲಿನ ದೇವರಕಾಡು, ಗೋಮಾಳ, ನದಿತಪ್ಪಲುಗಳಂಥ ಅಮೂಲ್ಯವಾದ ಸಾಮೂಹಿಕ ಭೂಮಿಗಳು ಅತಿಕ್ರಮಣ ಹಾಗೂ ಅವೈಜ್ಞಾನಿಕ ಬಳಕೆಯಿಂದಾಗಿ ನಾಶವಾಗುತ್ತಿವೆ. ಈ ಎಲ್ಲಾ ಬಗೆಯ ನೈಸರ್ಗಿಕ ಪ್ರದೇಶಗಳನ್ನು ರಕ್ಷಿಸುವ ಸೂಕ್ತ ನಿಯಮಗಳು ಹಾಗೂ ಯೋಜನೆಗಳನ್ನು ಜಂಟಿಯಾಗಿ ರೂಪಿಸುವಂತೆ, ಕಂದಾಯ ಹಾಗೂ ಅರಣ್ಯ ಇಲಾಖೆಗಳಿಗೆ ಕೋರಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

<u>47/15 – ಜಿಲ್ಲಾ ಮಟ್ಟದಲ್ಲಿ ಜೀವವೈವಿಧ್ಯ ಪ್ರಶಸ್ತಿ ಪ್ರಧಾನ:</u>

ರಾಜ್ಯ ಮಟ್ಟದಲ್ಲಿ ಕೋವಿಡ್-19ರ ಕಾರಣದಿಂದಾಗಿ ಜೀವವೈವಿಧ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತಿಲ್ಲಾ. 2020-21ನೇ ಸಾಲಿನ ಜೀವವೈವಿಧ್ಯ ಪ್ರಶಸ್ತಿಯನ್ನು ಎಲ್ಲಾ ಜಿಲ್ಲೆಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಅಂತರಾಷ್ಟ್ರೀಯ

ಜೀವವೈವಿಧ್ಯ ಅಭಿಯಾನದಡಿಯಲ್ಲಿ ಪ್ರಧಾನ ಮಾಡಲಾಗುವುದು. ಈ ವಿಷಯವನ್ನು ಸಭೆಯ ಮಾಹಿತಿಗಾಗಿ ಮಂಡಿಸಲಾಗಿದೆ.

## 47/16 – ಜೂನ್ 2021ರ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ:

ಜೂನ್ 2021ರಂದು ಪ್ರಕಟಗೊಂಡ ಕರ್ನಾಟಕ ರಾಜ್ಯ ಪತ್ರದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜೀವವೈವಿಧ್ಯ ನಿರ್ವಹಣಾ ಸಮಿತಿ) ನಿಯಮಗಳು 2021ರ ಅಧಿನಿಯಮವನ್ನು ಪ್ರಕಟಿಸಿದೆ. ಈ ಅಧಿಸೂಚನೆ ಪತ್ರದ 4ನೇ ಪುಟದಲ್ಲಿ ಜೀವವೈವಿಧ್ಯ ಮಂಡಳಿ ಆರಂಭಿಕ ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಿದೆ. ಈಗಾಗಲೇ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ತರಬೇತಿ ಕಾರ್ಯಕ್ರಮಗಳು ಮುಗಿದಿವೆ. ಅದರಂತೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಬಹುತೇಕವಾಗಿ ಮುಗಿದಿವೆ. ಸದರಿ ಚಟುವಟಿಕಾ ಕಾರ್ಯದಲ್ಲಿ ಮಂಡಳಿಯು ಸಲಹೆಯನ್ನು ನೀಡುವುದಾಗಿರುತ್ತದೆ.

ಆದಕಾರಣ ಆರಂಭಿಕ ಅನುದಾನವನ್ನು ಜೀವವೈವಿಧ್ಯ ಮಂಡಳಿಯು ನೀಡುವ ಅವಶ್ಯಕತೆ ಇರುವುದಿಲ್ಲ. ಈ ಅನುದಾನವನ್ನು ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಇಲಾಖೆಯವರೇ ಭರಿಸುವಂತೆ ಕ್ರಮಕೈಗೊಳ್ಳಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. (ಅನುಬಂಧ-8)

## 47/17-ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರನ್ನು (ಅಭಿವೃದ್ಧಿ) ಮಂಡಳಿಯ ಸಭೆಗೆ ವಿಶೇಷ ಆಹ್ವಾನಿತರನ್ನಾಗಿ ನೇಮಕಗೊಳಿಸುವ ಕುರಿತು.

ಜೈವಿಕವೈವಿಧ್ಯ ಅಧಿನಿಯಮ 2002 ಹಾಗೂ ಮಂಡಳಿಯ ಕಾರ್ಯ ಚಟುವಟಿಕೆಗಳನ್ನು ಪಂಚಾಯತ್ ರಾಜ್ ಇಲಾಖೆಯವರ ಸಂಪೂರ್ಣ ಸಹಕಾರದೊಂದಿಗೆ ಮುಂದುವರೆಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರನ್ನು (ಅಭಿವೃದ್ಧಿ) ವಿಶೇಷ ಆಹ್ವಾನಿತರನ್ನಾಗಿ ನೇಮಕಗೊಳಿಸಿ ಮಂಡಳಿಯ ಸಭೆಗಳಿಗೆ ಆಹ್ವಾನಿಸಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

## 47/18 – ಶ್ರೀ ಕೆ.ಆರ್. ಪ್ರಸನ್ನ, ತಾಂತ್ರಿಕ ಕಾರ್ಯನಿರ್ವಾಹಕರು (ಪಿಬಿಆರ್)ಇವರ ವೇತನ ಹೆಚ್ಚಳ ಕುರಿತು.

ಶ್ರೀ ಕೆ.ಆರ್. ಪ್ರಸನ್ನ, ತಾಂತ್ರಿಕ ಕಾರ್ಯನಿರ್ವಾಹಕರು (ಪಿಬಿಆರ್) ಮಂಡಳಿಯಲ್ಲಿ ಸುಮಾರು ಐದು ವರ್ಷಗಳಿಂದ ಜನತಾ ಜೀವವೈವಿಧ್ಯ ದಾಖಲಾತಿ ಶಾಖೆಯಲ್ಲಿ ಬಹಳ ಶ್ರಮವಹಿಸಿ ಹಾಗೂ ನಿಷ್ಠಾವಂತರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು

ಎಲ್ಲಾ ಜಿಲ್ಲೆಗಳ ಕ್ಷೇತ್ರ ಪ್ರವಾಸವನ್ನು ಕೈಗೊಂಡು ಜೀವವೈವಿಧ್ಯ ಸಂರಕ್ಷಣೆ ಕುರಿತು ತರಬೇತಿ ನೀಡುವುದರ ಮುಖಾಂತರ ಅರಿವನ್ನುಂಟು ಮಾಡಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೋವಿಡ್-19ರ ಮಾರಣಾಂತಿಕ ಖಾಯಿಲೆಯ ಸಂದರ್ಭದಲ್ಲೂ ಸಹ ಕಛೇರಿಯ ಕೆಲಸಗಳಲ್ಲಿ ತೊಡಗಿರುತ್ತಾರೆ. ಹಾಗೇಯೇ ಪಿಬಿಆರ್ ಸಮಾಲೋಚಕರ ಹುದ್ದೆಯ ಕಾರ್ಯವನ್ನೂ ಸಹ ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದಾರೆ. ಪ್ರಸ್ತುತದಲ್ಲಿ ಇವರು ರೂ 31,500/-ಗಳ ವೇತನವನ್ನು ಪಡೆಯುತ್ತಿದ್ದು ಸದರಿಯವರ ವೇತನವನ್ನು ರೂ 40,000/-ಗಳಿಗೆ ಹೆಚ್ಚಿಸಲು ಮಂಡಳಿಯ ಅನುಮೋದನೆಗೆ ಮಂಡಿಸಲಾಗಿದೆ. (ಅನುಬಂಧ-9)

ಈ ವಿಷಯವನ್ನು ಮಂಡಳಿಯ ಅನುಮೋದನೆಗೆ ಮಂಡಿಸಲಾಗಿದೆ.

<u>47/19 : ಎಬಿಎಸ್ ಸಮಾಲೋಚಕರು ಹಾಗೂ ಪಿಬಿಆರ್ ಸಮಾಲೋಚಕರು ಹುದ್ದೆಯ ಮಂಜೂರಾತಿ ಬಗ್ಗೆ.</u>

ಎಬಿಎಸ್ ಸಮಾಲೋಚಕರು ಹಾಗೂ ಪಿಬಿಆರ್ ಸಮಾಲೋಚಕರು 31/08/2021 ಹಾಗೂ 31/12/2021ರಂದು ಮುಕ್ತಾಯಗೊಳ್ಳಲಿದ್ದು ಸದರಿ ಹುದ್ದೆಗಳನ್ನು ಮತ್ತೆ ಮೂರು ವರ್ಷಗಳ ಅವಧಿಗೆ ಮುಂದುವರೆಸಲು ಮಂಡಳಿಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

<u>47/20 – ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಹಣಕಾಸಿನ ವರ್ಷದ ಬಜೆಟ್ ಅಂದಾಜು ವಿವರ:</u>

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಹಣಕಾಸಿನ ವರ್ಷದ ಬಜೆಟ್ ಅಂದಾಜು ವಿವರವನ್ನು ತಯಾರಿಸಿದ್ದು ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ (ಅನುಬಂಧ-10)

| | |
|---|---|
| ಸಹಿ/- | ಸಹಿ/- |
| ಅಧ್ಯಕ್ಷರು | ಸದಸ್ಯ ಕಾರ್ಯದರ್ಶಿ |
| ಕರ್ನಾಟಕ ಜೀವವೈವಿಧ್ಯ ಮಂಡಳಿ | ಕರ್ನಾಟಕ ಜೀವವೈವಿಧ್ಯ ಮಂಡಳಿ |